MARCH 23, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

**ಮುಖ್ಯಾಂಶಗಳು**

- **ವಿಶ್ವ ಜಲ ದಿನಾಚರಣೆ:** 'ಜಲವೇ ಜೀವ', ನೀರು ಕೊಯ್ಲು ಸಾಪ್ತಾಹಿಕ ಅಭಿಯಾನಕ್ಕೆ, ಚಾಲನೆ.
- **ಮಾರಾಟ ಮಳಿಗೆಗಳು,** ಕನಿಷ್ಠ ಬೆಲೆಗೆ, ಖಾಲಿ ಪ್ಲಾಸ್ಟಿಕ್ ಬಾಟಲಿ ಮರು ಖರೀದಿಸುವಂತೆ, ಹೊಸ ನಿಯಮ ಜಾರಿಗೆ – ಸಚಿವ ಈಶ್ವರ ಖಂಡ್ರೆ.
- **'ಕೃಷಿ ಸೇವಾ ಗೌರವ ಪ್ರಶಸ್ತಿ';** ರಾಯಚೂರಿನ ಕವಿತಾ ಮಿಶ್ರಾ ಅವರಿಗೆ, ಇಂದು ಧಾರವಾಡದಲ್ಲಿ, ಪ್ರದಾನ.
- **ಪಂಡಿತ ಪಂಚಾಕ್ಷರಿ ಗವಾಯಿ** ರಾಷ್ಟ್ರೀಯ ಯುವ ಪುರಸ್ಕಾರ, ಮುಂಬೈಯ ಆದಿತ್ಯ ಮೋಡಕ್, ಭಾಜನ.

**ವಿಶ್ವ ಜಲ ದಿನದ ನಿಮಿತ್ತ,** 'ಜಲವೇ ಜೀವ' ಎಂಬ, ನೀರು ಸಂರಕ್ಷಣಾ ಅಭಿಯಾನಕ್ಕೆ, ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ. ಶಿವಕುಮಾರ, ಚಾಲನೆ ನೀಡಿದ್ದಾರೆ. 'ನಮ್ಮ ನೀರು, ನಮ್ಮ ಹಕ್ಕು; ನೀರು ಉಳಿಸಿ, ಭವಿಷ್ಯ ಬೆಳಗಿಸಿ' ಎಂಬ ಧ್ಯೇಯದೊಂದಿಗೆ, ಜಲ ಸಪ್ತಾಹ ಆಚರಿಸಲಾಗುವುದು ಎಂದು, ಎಕ್ಸ್ ಮಾಧ್ಯಮದಲ್ಲಿ ಅವರು ತಿಳಿಸಿದ್ದಾರೆ. ಮಹಾದಾಯಿ, ಮೇಕೆದಾಟು, ಭದ್ರಾ ಮೇಲ್ದಂಡೆ ಯೋಜನೆಗಳ ಮೂಲಕ, ಕರ್ನಾಟಕದ ಜಲ ಭದ್ರತೆಗಾಗಿ ರಾಜ್ಯ ಸರ್ಕಾರ ಬದ್ಧತೆ ಮೆರೆದಿದೆ, ಎಂದಿದ್ದಾರೆ.

<><><>

**'ಜಲ, ಅರಣ್ಯ, ಜನ: ಒಂದೇ ಪ್ರಾಕೃತಿಕ ಬಾಂಧವ್ಯ,** ಅಭಿಯಾನ'ಕ್ಕೆ ಕೇಂದ್ರ ಜಲ ಶಕ್ತಿ ಖಾತೆ ಸಚಿವ, ಸಿ.ಆರ್. ಪಾಟೀಲ, ಹರಿಯಾಣದ ಪಂಚಕುಲದಲ್ಲಿ ಚಾಲನೆ ನೀಡಿದರು. ವಿಶ್ವ ಜಲ ದಿನಾಚರಣೆ ಹಿನ್ನೆಲೆ, ಜಲಶಕ್ತಿ ಅಭಿಯಾನ; ಮಳೆ ನೀರಿನ ಸಂಗ್ರಹ, ಅಂತರ್ಜಲ ಮರುಪೂರಣದ ಮಹತ್ವ ಕುರಿತು, ದೇಶದ ನೂರ ನಲವತ್ತೆಂಟು ಜಿಲ್ಲೆಗಳಲ್ಲಿ ಜನಜಾಗೃತಿ ಆಯೋಜಿಸಲಾಗಿದೆ.

<><><>

**'ಹಿಮ ನದಿಗಳ ಸಂರಕ್ಷಣೆ'** ಧ್ಯೇಯದೊಂದಿಗೆ, ವಿಶ್ವ ಜಲ ದಿನ ಆಚರಿಸಲಾಯಿತು. ಸಿಹಿ ನೀರಿನ ಸಮರ್ಪಕ ಪೂರೈಕೆಯನ್ನು ನಿರ್ವಹಿಸುವಲ್ಲಿ, ಹಿಮ ನದಿಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಹವಾಮಾನ ಬದಲಾವಣೆಯಿಂದಾಗಿ, ಹಿಮ ನದಿಗಳ ಸಂರಕ್ಷಣೆಯ ತುರ್ತು ಅಗತ್ಯದ ಕುರಿತು, ಜನ ಜಾಗ್ರತಿಗೆ ಈ ದಿನ ಮೀಸಲು.

<><><>

**ಬೆಂಗಳೂರು ಗ್ರಾಮಾಂತರ** ಜಿಲ್ಲೆ, ದೊಡ್ಡಬಳ್ಳಾಪುರ ತಾಲೂಕು, ಹಾಡೋನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ, ವಿಶ್ವ ಜಲ ದಿನಾಚರಣೆ ಜರುಗಿತು.

<><><>

**ಹಾವೇರಿ ಜಿಲ್ಲೆ, ರಾಣಿಬೆನ್ನೂರು ತಾಲೂಕು,** ಕಾಕೋಳವನ್ನು ಸಾಂಘಿಕ ಪ್ರಯತ್ನದ ಮೂಲಕ, ಜಲ ಸಂಪನ್ನವಾಗಿಸಿದ ಜಲಯೋಧ, ಪ್ರಗತಿಪರ ಕೃಷಿಕ ಚನ್ನಬಸಪ್ಪ ಕೋಂಬಳಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಕುಡಿಯುವ ನೀರಿನ ಖಾಲಿ ಬಾಟಲಿಗಳನ್ನು,** ಮಾರಾಟ ಮಳಿಗೆಗಳು, ಕನಿಷ್ಠ ಬೆಲೆ ನೀಡಿ, ಮರು ಖರೀದಿಸುವಂತೆ ನಿಯಮ ರೂಪಿಸಲು, ಸೂಚಿಸಿದ್ದಾಗಿ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಪ್ಲಾಸ್ಟಿಕ್ ತ್ಯಾಜ್ಯ ನಿಯಂತ್ರಣ ಮತ್ತು ಪರಿಸರ ಸಂರಕ್ಷಣೆಗಾಗಿ, ನೀರು ಮಾರಾಟ ಮಾಡುವ ಕಂಪನಿಗಳಿಗೆ, ಖಾಲಿ ಬಾಟಲಿಗಳನ್ನು ಹಿಂಪಡೆದು, ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ಜವಾಬ್ದಾರಿಯನ್ನು ನೀಡುವಂತೆ, ನಿಯಮ ರೂಪಿಸಲಾಗುವುದು ಎಂದು, ಎಕ್ಸ್ ಮಾಧ್ಯಮದಲ್ಲಿ ಅವರು ಹೇಳಿದ್ದಾರೆ.

ಉತ್ಪಾದಕರ ವಿಸ್ತರಿತ ಜವಾಬ್ದಾರಿ (EPR) ಅಡಿ, ಕಂಪೆನಿಗಳು, ತಮ್ಮ ಉತ್ಪನ್ನಗಳಿಂದ ಪರಿಸರದ ಮೇಲಾಗುವ ಪರಿಣಾಮಗಳನ್ನು ಸಹ ನಿರ್ವಹಿಸಬೇಕಿದೆ. ಅರಣ್ಯ, ಜಲಮೂಲಗಳು ಪ್ಲಾಸ್ಟಿಕ್ ತ್ಯಾಜ್ಯ ಮುಕ್ತಗೊಳ್ಳಬೇಕಿದೆ, ಎಂದಿದ್ದಾರೆ.

<><><>

**ಕೊಪ್ಪಳ ಸಮೀಪ,** ಬಲ್ಡೋಟಾ ಸ್ಟೀಲ್ ಮತ್ತು ಪವರ್ ಲಿಮಿಟೆಡ್ ಕಂಪೆನಿ, ಘಟಕ ಸ್ಥಾಪನೆ ಕುರಿತಂತೆ, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ಹಾಗೂ ಪರಿಸರ ಅಧ್ಯಯನಿಗಳಿಂದ ವರದಿ ಪಡೆದು, ಪರಿಸರಕ್ಕೆ ಯಾವುದೇ ಹಾನಿಯಾಗದು ಎಂಬುದನ್ನು, ಖಾತ್ರಿ ಪಡಿಸಿಕೊಂಡು ಮುಂದುವರೆಯುವುದಾಗಿ, ಕೈಗಾರಿಕೆ ಖಾತೆ ಸಚಿವ ಎಂ.ಬಿ.ಪಾಟೀಲ ಸ್ಪಷ್ಟ ಪಡಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಈ ಮಾಹಿತಿ ನೀಡಿ, ಕೊಪ್ಪಳ ಜನತೆ, ಶ್ರೀ ಅಭಿನವ ಗವಿಸಿದ್ಧೇಶ್ವರ ಶ್ರೀಗಳು ಹಾಗೂ ಶ್ರೀ ಮಠಕ್ಕೆ, ಯಾವುದೇ ತೊಂದರೆಯಾಗುವ ನಿರ್ಣಯ, ಕೈಗೊಳ್ಳುವುದಿಲ್ಲ ಎಂದಿದ್ದಾರೆ.

<><><>

**ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ,** ಧಾರವಾಡದ ಬೆಲ್ಲದ ಕೃಷಿ ಮತ್ತು ಶಿಕ್ಷಣ ಪ್ರತಿಷ್ಠಾನದ ಸಹಯೋಗದಲ್ಲಿ, 'ಕೃಷಿ ಸೇವಾ ಗೌರವ ಪ್ರಶಸ್ತಿ'ಯನ್ನು, ರಾಯಚೂರು ಜಿಲ್ಲೆ, ಮಾನ್ವಿ ತಾಲೂಕು, ಕವಿತಾಳ ಗ್ರಾಮದ, ಗಣಕಯಂತ್ರ ತಂತ್ರಜ್ಞೆ ಹಾಗೂ ಪ್ರಯೋಗಶೀಲ ಕೃಷಿಕ ಮಹಿಳೆ, ಕವಿತಾ ಮಿಶ್ರಾ ಅವರಿಗೆ, ಇಂದು ಸಂಜೆ 6 ಗಂಟೆಗೆ, ರಾ.ಹ. ದೇಶಪಾಂಡೆ ಸಭಾ ಭವನದಲ್ಲಿ, ಗಣ್ಯರು ಪ್ರದಾನ ಮಾಡಲಿದ್ದಾರೆ. ಸಮಗ್ರ ಕೃಷಿ ಅಳವಡಿಸಿಕೊಂಡು, ಲಾಭದಾಯಕವಾಗಿಸಿದ ಕವಿತಾ ಉಮಾಶಂಕರ ಮಿಶ್ರಾ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

**ರಾಯಚೂರು ಜಿಲ್ಲೆ, ಮಾನ್ವಿಯ,** ವಿದ್ಯಾಧರೆ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ, ಮುಂಬೈಯ ಖ್ಯಾತ ಗಾಯಕ ಆದಿತ್ಯ ಮೋಡಕ್ ಅವರಿಗೆ, ಪಂಡಿತ ಪಂಚಾಕ್ಷರಿ ಗವಾಯಿ ರಾಷ್ಟ್ರೀಯ ಯುವ ಪುರಸ್ಕಾರವನ್ನು, ಇಂದು ಸಂಜೆ 6.30ಕ್ಕೆ ಧಾರವಾಡದ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಗಣ್ಯರು ಪ್ರದಾನಿಸಿ, ಗೌರವಿಸಲಿದ್ದಾರೆ. ಖ್ಯಾತ ಹಿಂದೂಸ್ಥಾನಿ ಗಾಯಕ, ಮಾನ್ವಿಯ ಪಂಡಿತ ವಿರೂಪಾಕ್ಷಯ್ಯ ವಂದಲಿ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

**ಛತ್ತೀಸಗಢದ ಸಣ್ಣ ಕಥೆಗಾರ,** 88 ವರ್ಷದ ವಿನೋದಕುಮಾರ ಶುಕ್ಲಾ ಅವರು, 59ನೇ ಜ್ಞಾನಪೀಠ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕಥೆಗಾರ್ತಿ, ಪ್ರತಿಭಾ ರಾಯ್ ಅಧ್ಯಕ್ಷತೆಯ ಸಮಿತಿ, ವಿನೋದ್ ಅವರನ್ನು ಆಯ್ಕೆ ಮಾಡಿದೆ. ಛತ್ತೀಸಗಢ ರಾಜ್ಯಕ್ಕೆ, ಮೊದಲ ಬಾರಿಗೆ ಈ ಪ್ರಶಸ್ತಿ ಸಂದಿದೆ. ಪ್ರಶಸ್ತಿ 11 ಲಕ್ಷ ರೂಪಾಯಿ ನಗದು, ಸರಸ್ವತಿಯ ಕಂಚಿನ ಮೂರ್ತಿ ಹಾಗೂ ಪ್ರಮಾಣಪತ್ರವನ್ನು ಒಳಗೊಂಡಿದೆ.

<><><>

**1931, ಮಾರ್ಚ್ 23 ರಂದು,** ಬ್ರಿಟಿ 'ರಿಂದ ಗಲ್ಲಿಗೇರಿಸಲ್ಪಟ್ಟ ಸ್ವಾತಂತ್ರ್ಯ ಸೇನಾನಿಗಳಾದ, ಭಗತ್ ಸಿಂಗ್, ಶಿವರಾಮ್ ರಾಜಗುರು ಮತ್ತು ಸುಖದೇವ್ ಥಾಪರ್ ಅವರ ತ್ಯಾಗವನ್ನು ಸ್ಮರಿಸುವ, ಹುತಾತ್ಮರ ದಿನವಿಂದು.

<><><>

**ಮಾಧ್ಯಮ ಅಕಾದೆಮಿ,** ಇಂದು ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆಯಲ್ಲಿ, ಪತ್ರಿಕಾ ಛಾಯಾಗ್ರಹಣ ಕುರಿತು, "ಫೋಕಸ್ ಆನ್ ನ್ಯೂಸ್" ಕಾರ್ಯಾಗಾರ ಆಯೋಜಿಸಿದೆ. ರಾಷ್ಟ್ರ ಪ್ರಶಸ್ತಿ ಪುರಸ್ಕೃತ, ಪತ್ರಿಕಾ ಛಾಯಾಗ್ರಾಹಕಿ ಶಿಪ್ರಾ ದಾಸ್, ಪಾಲ್ಗೊಳ್ಳಲಿದ್ದು, ಕಾರ್ಯಾಗಾರವನ್ನು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ಉದ್ಘಾಟಿಸಲಿದ್ದಾರೆ. ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ, ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ.

<><><>

**ಸಮಾರೋಪ ಸಮಾರಂಭದಲ್ಲಿ** ವಿಧಾನ ಪರಿ 'ತ್ ಸಭಾಪತಿ ಬಸವರಾಜ ಹೊರಟ್ಟಿ, ಅಕಾದೆಮಿ ಅಧ್ಯಕ್ಷರಾದ ಆಯೇಶಾ ಖಾನಂ ಭಾಗವಹಿಸಲಿದ್ದಾರೆ.

<><><>

**ಆಸ್ತಿ ತೆರಿಗೆ ವಂಚಕರ ಮೇಲೆ ನಿಗಾ ಇಡಲು,** ಹುಬ್ಬಳ್ಳಿ, ಧಾರವಾಡ ಮಹಾ ನಗರ ಪಾಲಿಕೆ, ಕಂದಾಯ ಜಾಗೃತ ದಳ ರಚಿಸಲಿದೆ.

<><><>

**ಬೆಳಗಾವಿ ಜಿಲ್ಲೆ,** ಸವದತ್ತಿಯ ತಾಲೂಕು ಕ್ರೀಡಾಂಗಣದಲ್ಲಿ ಇಂದು ಬೆಳಗ್ಗೆ 8 ಗಂಟೆಗೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಉಚಿತ ಆರೋಗ್ಯ ಪರೀಕ್ಷಾ ಮೇಳ ಆಯೋಜಿಸಿದೆ.

<><><>

**ಭಾರತೀಯ ಭೂ ಸೇನೆ,** ನಾಳೆ 24 ರಂದು, ಬೆಳಗ್ಗೆ 9 ಗಂಟೆಗೆ, ಮಡಿಕೇರಿಯ ಸ್ಟುವರ್ಟ್ ಹಿಲ್‌ನ, ಕ್ರಿಸ್ಟಲ್ ಹಾಲ್‌ನಲ್ಲಿ, ಮಾಜಿ ಯೋಧರು ಹಾಗೂ ವೀರ ನಾರಿಯರ, ಸಭೆ ಆಯೋಜಿಸಿದೆ.

<><><>

**ಕಲಬುರಗಿಯ, 'ಜಿಮ್ಸ್' ಆಸ್ಪತ್ರೆಯಲ್ಲಿ,** ಡಯಾಲಿಸಿಸ್ ಕೇಂದ್ರ ಕಾರ್ಯಾರಂಭಿಸಲಿದೆ ಎಂದು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಶರಣಪ್ರಕಾಶ ಪಾಟೀಲ ತಿಳಿಸಿದ್ದಾರೆ.

<><><>

**ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯಡಿ,** ಸಹಕಾರಿಗಳು ನೋಂದಾಯಿಸಲು ಹಾಗೂ ನವೀಕರಿಸಲು, ಈ ತಿಂಗಳ 31ರ ವರೆಗೆ ಅವಕಾಶ ಕಲ್ಪಿಸಿದ್ದಾಗಿ, ಸಹಕಾರ ಸಂಘಗಳ ನಿಬಂಧಕರು ತಿಳಿಸಿದ್ದಾರೆ.

<><><>

- **ವಿಶ್ವ ಜಲ ದಿನಾಚರಣೆ;** 'ಜಲವೇ ಜೀವ', ನೀರು ಕೊಯ್ಲು ಸಾಪ್ತಾಹಿಕ ಅಭಿಯಾನಕ್ಕೆ, ಚಾಲನೆ.
- **ಮಾರಾಟ ಮಳಿಗೆಗಳು,** ಕನಿಷ್ಟ ಬೆಲೆಗೆ, ಖಾಲಿ ಪ್ಲಾಸ್ಟಿಕ್ ಬಾಟಲಿ ಮರು ಖರೀದಿಸುವಂತೆ, ಹೊಸ ನಿಯಮ ಜಾರಿಗೆ – ಸಚಿವ ಈಶ್ವರ ಖಂಡ್ರೆ.
- **'ಕೃಷಿ ಸೇವಾ ಗೌರವ ಪ್ರಶಸ್ತಿ';** ರಾಯಚೂರಿನ ಕವಿತಾ ಮಿಶ್ರಾ ಅವರಿಗೆ, ಇಂದು ಧಾರವಾಡದಲ್ಲಿ, ಪ್ರದಾನ.
- **ಪಂಡಿತ ಪಂಚಾಕ್ಷರಿ ಗವಾಯಿ** ರಾಷ್ಟ್ರೀಯ ಯುವ ಪುರಸ್ಕಾರ, ಮುಂಬೈಯ ಆದಿತ್ಯ ಮೋಡಕ್, ಭಾಜನ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>